## ದಿನಾಂಕ 22-5-2010 ರಂದು ಶನಿವಾರ ಸಾಯಂಕಾಲ 4.00 ಗಂಟೆಗೆ ನಡೆದ ಅಂಕೋಲಾ ಪಟ್ಟಣ ಪಂಚಾಯತದ ಸಾಮಾನ್ಯ ಸಭೆಯ ನಡವಳಿಕೆಗಳು

### ಹಾಜರಿದ್ದ ಸದಸ್ಯರು

| | | | |
|---|---|---|---|
| 1) | ಫರ್ನಾಂಡೀಸ ಜುವೇಲಾ ಸಾವೇರ | – | ಅಧ್ಯಕ್ಷರು |
| 2) | ಅನಿತಾ ಕೃಷ್ಣಾನಂದ ಬಂಟ | – | ಉಪಾಧ್ಯಕ್ಷರು. |
| 3) | ಬಂಟ ಚಂದ್ರಕಾಂತ ಚೂಡಾಮಣಿ | – | ಸದಸ್ಯರು |
| 4) | ಸವಿತಾ ಸೋಮು ಗೌಡಾ | – | “ ” |
| 5) | ಜಿ. ಎ. ಮಹಾಲಕ್ಷೀ ಲಕ್ಷೀ ನರಸಯ್ಯ | – | ‘ “ |
| 6) | ಗೋಪಾಲಕೃಷ್ಣ (ನಾಗೇಂದ್ರ) ಚೆನ್ನಪ್ಪ ನಾಯ್ಕ | – | “ “ |
| 7) | ಶೇಖ ಶಮಶಾದ ಅಜಮುದ್ದೀನ ಶೇಖ | – | “ ” |
| 8) | ಅಜಿತ ಪೀರು ನಾಯ್ಕ | – | “ “ |
| 9) | ಅರುಣ ದಯಾನಂದ ನಾಡಕರ್ಣಿ | – | “ “ |
| 10) | ನಾಯಕ ಸುಮಿತಾ ಪಾಂಡುರಂಗ | – | “ “ |
| 11) | ಸದಾನಂದ ಕುಪ್ಪಯ್ಯ ಗುಡಿಗಾರ | – | ‘ “ |
| 12) | ಭಾಸ್ಕರ ಕೆ. ನಾರ್ವೇಕರ | – | “ “ |
| 13) | ಕೃಷ್ಣಕುಮಾರ ವಿ. ಮಹಾಲೆ | – | “ ” |

### ಚರ್ಚಿಸತಕ್ಕ ವಿಷಯಗಳು

**ವಿ**ಷಯ ನಂ. 01 ದಿನಾಂಕ 26–03–2010 ರಂದು ಜರುಗಿದ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವದು.

ಠರಾವ ನಂ. 01 ದಿನಾಂಕ: 26–03–2010 ರಂದು ಜರುಗಿದ ಸಾಮಾನ್ಯ ಸಭೆಯ ನಡವಳಿಕೆಗಳನ್ನು ದೃಢೀಕರಿಸುವ ಬಗ್ಗೆ ವಿಷಯವನ್ನು ಮಂಡಿಸಲಾಗಿ ಸದ್ರಿ ವಿಷಯದ ಮೇಲೆ ಚರ್ಚಿಸಲಾಗಿ ಬಾಡಿಗೆಯನ್ನು ಸಮರ್ಪಕವಾಗಿ ವಸೂಲಿ ಮಾಡದೇ ಇರುವುದರಿಂದ ಬಾಡಿಗೆಯನ್ನು ವಸೂಲಿ ಮಾಡುವ ಬಗ್ಗೆ ಸಭೆಯಲ್ಲಿ ಪ್ರಸ್ಥಾಪಿಸಿ ಕರಾರುನಾಮೆಯನ್ನು ಮಾಡಿ ಅವಧಿ ಮುಗಿದಿರುವ ಮಳಿಗೆಯನ್ನು ಸೀಜ್ ಮಾಡಿ ಹರಾಜು ಮಾಡುವಂತೆ ಕ್ರಮ ಜರುಗಿಸುವ ಬಗ್ಗೆ ಸಭೆಯಲ್ಲಿ ಪ್ರಸ್ಥಾಪಿಸಿ ಠರಾವು ಪಾಸು ಮಾಡಲಾಯಿತು.

ವಿಷಯ ನಂ. 02 ದಿನಾಂಕ 30–04–2010 ರಂದು ಜರುಗಿದ ಸ್ಥಾಯಿಸಮಿತಿ ಸಭೆಯ ನಡವಳಿಕೆಗಳನ್ನು ದೃಢೀಕರಿಸುವದು.

ಠರಾವ ನಂ. 02 ದಿನಾಂಕ 30–04–2010 ರಂದು ಜರುಗಿದ ಸ್ಥಾಯಿಸಮಿತಿ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸಲಾಯಿತು.

ವಿಷಯ ನಂ.–03 ಮಾರ್ಚ 2010 ರ ಜಮಾ–ಖರ್ಚನ್ನು ಪರೀಶೀಲಿಸಿ, ಮಂಜೂರಿ ನೀಡುವದು.

ಠರಾವ ನಂ– 03 ಮಾರ್ಚ 2010 ರ ಜಮಾ–ಖರ್ಚನ್ನು ಸಭೆಯು ಪರೀಸೀಲಿಸಿತು. ಈ ಕೆಳಗಿನಂತೆ ಸಂಕ್ಷಿಪ್ತ ಮಾಹಿತಿಯುಳ್ಳ ಜಮಾ–ಖರ್ಚಿಗೆ ಒಪ್ಪಿಗೆ ನೀಡಿ, ಠರಾವು ಸರ್ವಾನು ಮತದಿಂದ ಪಾಸು ಮಾಡಲಾಯಿತು.

| | <u>ಮಾರ್ಚ 2010</u> |
|---|---|
| 1) ಆರಂಭದ ಶಿಲ್ಕು | **5588930.00** |
| 2) ತಿಂಗಳ ಜಮಾ | **5376597.00** |
| 3) ಅಂತೂ ಜಮಾ | **10965527.00** |
| 4) ತಿಂಗಳ ಖರ್ಚು | **7493890.00** |
| 5) ಕೊನೆಯ ಶಿಲ್ಕು | **3471637.00** |

ಸೂ : ಅರುಣ ಡಿ. ನಾಡಕರ್ಣಿ
ಅ : ಭಾಸ್ಕರ ಕೆ. ನಾರ್ವೇಕರ

ವಿಷಯ ನಂ–04 ಸರ್ಕಾರದ ಆದೇಶ ನಂ. ನಅಇ/102ಸಮಸ/2009 ಬೆಂಗಳೂರು ದಿನಾಂಕ: 19–4–2010 ರ ಪತ್ರದಂತೆ CMSMTDP ಯೋಜನೆಯಡಿ 14.00 ಲಕ್ಷಗಳ ಕ್ರಿಯಾಯೋಜನೆಯನ್ನು ಕೊಳಚೆ ಪ್ರದೇಶ ಅಭಿವೃದ್ಧಿ ಕಾಮಗಾರಿಯಡಿ ಕ್ರಿಯಾ ಯೋಜನೆ ತಯಾರಿಸುವ ಕುರಿತು.

ಠರಾವ ನಂ– 04 CMSMTDP ಯೋಜನೆ ಅಡಿಯಲ್ಲಿ 14.00 ಲಕ್ಷಗಳ ಕ್ರಿಯಾಯೋಜನೆ ತಯಾರಿಸುವ ಬಗ್ಗೆ ಸಭೆಯಲ್ಲಿ ಮಂಡಿಸಿದಂತೆ ಈ ಬಗ್ಗೆ ಸರ್ಕಾರದ ಸುತ್ತೋಲೆಯಲ್ಲಿ ಕಾಮಗಾರಿಗಳನ್ನು ಕೊಳಚೆ ಪ್ರದೇಶದಲ್ಲಿ ನಿರ್ವಹಿಸಬೇಕಾಗಿರುವುದರಿಂದ ಈ ಕೆಳಗಿನಂತೆ ಪ್ರಸ್ಥಾವನೆಯನ್ನು ಸಲ್ಲಿಸುವ ಬಗ್ಗೆ ಸಭೆಯಲ್ಲಿ ಒಪ್ಪಿಗೆಯನ್ನು ನೀಡಲಾಯಿತು.

| | | |
|---|---|---|
| 1. | ಕಾಕರಮಠ ಕೊಳಚೆ ಪ್ರದೇಶದ ಮುಖ್ಯ ನಾಲಾದ ಪಕ್ಕದಲ್ಲಿ ರಸ್ತೆಯನ್ನು ಎತ್ತರಿಸಿ ಪಿಚಿಂಗನ್ನು ನಿರ್ಮಿಸುವುದು. | ರೂ. 5.00 ಲಕ್ಷ |
| 2. | ಕಾಕರಮಠ ಕೊಳಚೆ ನಾಲಾಕ್ಕೆ ಮಲೀನ ನೀರು ಸೇರುವಂತೆ 9 ವ್ಯಾಸದ ಕೊಳವೆಯನ್ನು ಜೋಡಿಸುವುದು. | ರೂ. 4.00 ಲಕ್ಷ |
| 3. | ಕೇಣಿ ಕೊಳಚೆ ಪ್ರದೇಶದಲ್ಲಿ ರಸ್ತೆಯನ್ನು ಅಗಲೀಕರಣ ಮಾಡಿ ಪಿಚಿಂಗನ್ನು ನಿರ್ಮಿಸುವುದು. | ರೂ. 5.00 ಲಕ್ಷ |

ಸದ್ರಿ ಕಾಮಗಾರಿಗಳನ್ನು CMSMTDP ಯೋಜನೆಯಡಿ ಕೊಳಚೆ ಅಭಿವೃದ್ಧಿ ಪ್ಯಾಕೇಜನಲ್ಲಿ ಸೇರ್ಪಡೆ ಮಾಡಿ ಮಾನ್ಯ ಉಸ್ತುವಾರಿ ಸಚಿವರ ಅನುಮೋದನೆಯನ್ನು ಪಡೆದು ಸರಕಾರಕ್ಕೆ ಸಲ್ಲಿಸುವಂತೆ ಸಭೆಯಲ್ಲಿ ಮಂಜೂರಾತಿಯನನು ನೀಡಿ ಠರಾವು ಪಾಸು ಮಾಡಲಾಯಿತು.

ಸೂ : ಅಜಿತ ಪಿ. ನಾಯ್ಕ
ಅ : ನಾಗೇಂದ್ರ ಸಿ. ನಾಯ್ಕ

ವಿಷಯ ನಂ–05 ಇಂಧನ ಉಳಿತಾಯದ ಬಗ್ಗೆ ಬಿಡುಗಡೆಯಾದ ಅನುದಾನ ರೂ. 8.00 ಲಕ್ಷಗಳಿಗೆ ಇ.ಎಂ.ಎಸ್. ಹಾಗೂ ಸೋಲಾರ ಯೂನಿಟ್‌ಗಳನ್ನು ಶೇಕಡಾ 80% ಮತ್ತು 20% ರ ಅನುಪಾತದಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ DGSND ದರದಂತೆ ಅಧಿಕೃತ ಮಾರಾಟಗಾರದಿಂದ ಬಂದ ದರವನ್ನು ಅನುಮೋದಿಸಿ ಜಿಲ್ಲಾಧಿಕಾರಿಗಳ ಮಂಜೂರಾತಿಗಾಗಿ ಪ್ರಸ್ಥಾವನೆ ಸಲ್ಲಿಸುವ ಕುರಿತು.

ಠರಾವ ನಂ. 05 ಇಂಧನ ಉಳಿತಾಯದ ಬಗ್ಗೆ ಮಂಜೂರಾದ ಅನುದಾನದಲ್ಲಿ ಸರ್ಕಾರದ ಸುತ್ತೋಲೆಯಂತೆ ಕ್ರಮ ಕೈಗೊಳ್ಳ ಬೇಕಾಗಿರುವುದರಿಂದ ಶೇಕಡಾ 80 ರಷ್ಟು ಅನುದಾನದನ್ನು ಇ.ಎಂ.ಎಸ್. ಯುನಿಟ್‌ನ್ನು ಖರೀದಿಸಿ ಅಳವಡಿಸುವ ಬಗ್ಗೆ ಹಾಗೂ ಶೇಕಡಾ 20 ರಷ್ಟು ಹಣವನ್ನು ಸೋಲಾರ ಯುನಿಟ್‌ಗಳನ್ನು ಅಳವಡಿಸುವಂತೆಯು ಬಂದ ಮಾನ್ಯ ಜಿಲ್ಲಾಧಿಕಾರಿಗಳ ಪತ್ರವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಟೆಂಡರ ಕರೆದು ಕಾಮಗಾರಿಯನ್ನು ನಿರ್ವಹಿಸಲು ವಿಳಂಬವಾಗುತ್ತಿರುವುದರಿಂದ ಹಾಗೂ ಈಗಾಗಲೇ ಸಾಕಷ್ಟು ವಿಳಂಬವಾಗಿರುವುದರಿಂದ DGS&D ದರದಲ್ಲಿ ಕಿಯೋನಿಕ್ಸ ಕಂಪನಿಯವರಿಂದ ದರಗಳ ಪಟ್ಟಿಯನ್ನು ಪಡೆದು ಖರೀದಿಸಲು ಸಭೆಯು ಮಂಜೂರಾತಿಯನ್ನು ನೀಡಿ ಈ ಬಗ್ಗೆ ಪ್ರಸ್ಥಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಒಪ್ಪಿಗೆ ಪಡೆದು ಹಣ ಸಂದಾಯ ಮಾಡಲು ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ : ಕೃಷ್ಣಕುಮಾರ ಮಹಾಲೆ
ಅ : ಸದಾನಂದ ಕೆ. ಗುಡಿಗಾರ

ಠರಾವ ನಂ–06 CMSMTDP ಯೋಜನೆಯಡಿ 16.00 ಲಕ್ಷಗಳ ಬಗ್ಗೆ ಬಂದ ಟೆಂಡರನ್ನು ಅನುಮೋದಿಸಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ಥಾವನೆಯನ್ನು ಸಲ್ಲಿಸುವ ಕುರಿತು.

ಠರಾವ ನಂ–06 CMSMTDP ಯೋಜನೆ ಅಡಿಯಲ್ಲಿ 16.00 ಲಕ್ಷಗಳ ಬಗ್ಗೆ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ ಕರೆಯಲಾಗಿ ಬಂದ ಟೆಂಡರನ್ನು ಒಡೆದು ಸಭೆಯಲ್ಲಿ ಮಂಡಿಸಲಾಯಿತು.

| ಅ. ನಂ. | ಕಾಮಗಾರಿ ಹೆಸರು | ಅಂದಾಜು ದರ | ಟೆಂಡರ ದರ | ಟೆಂಡರ ಸಲ್ಲಿಸಿದ ಗುತ್ತಿಗೆದಾರರ ಹೆಸರು | ಗುತ್ತಿಗೆದಾರರು ಸಲ್ಲಿಸಿದ ದರ | ಶರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ಸಪ್ನಾ ಹೊಟೇಲ ಹತ್ತಿರ ಪಕ್ಕಾ ಗಟಾರ ನಿರ್ಮಿಸಿ ಸ್ಲ್ಯಾಬ ಅಳವಡಿಸುವುದು. | 16.00 ಲಕ್ಷ | 16.00 ಲಕ್ಷ | ಸುಕ್ರು ಎಸ. ಗೌಡ | ಅಂದಾಜು ಪತ್ರಿಕೆ ದರದಂತೆ | ಸುಕ್ರು ಎಸ್. ಗೌಡ ರವರು ಸಲ್ಲಿಸಿದ ಟೆಂಡರ ದರವು ಅತಿ ಕಡಿಮೆ ಇರುವುದರಿಂದ ಅವರ ಟೆಂಡರನ್ನು ಅನುಮೋದಿಸಲಾಗಿದೆ. |
| 2. | ಕಂತ್ರಿ ರಸ್ತೆಯಿಂದ ಕೇಣಿ ರಸ್ತೆ ಸೇರುವ ರಸ್ತೆ ಅಗಲೀಕರಣ ಮಾಡಿ ಮೆಟಲಿಂಗ ಮಾಡುವುದು. | | | ಸಂತೋಷ ಆರ. ನಾಯ್ಕ | ಶೇ. 2.55 ಹೆಚ್ಚಳ | |
| | | | | ಕೃಷ್ಣ ಎಸ್. ನಾಯ್ಕ | ಶೇ. 7.53 ಹೆಚ್ಚಳ | |

ಸದ್ರಿ ಈ ಕಾಮಗಾರಿಗೆ ಸುಕ್ರು ಎಸ್. ಗೌಡ ರವರು ಅಂದಾಜು ಪತ್ರಿಕೆ ದರದಂತೆ ಸಲ್ಲಿಸಿದ ಟೆಂಡರ ದರವನ್ನು ಅನುಮೋದಿಸಿ ಮಂಜೂರಿ ಮಾಡಿ ಪ್ರಸ್ಥಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವ ಬಗ್ಗೆ ಸಭೆಯು ಮಂಜೂರಾತಿಯನ್ನು ನೀಡಿ ಠರಾವು ಪಾಸು ಮಾಡಲಾಯಿತು.

ಸೂ : ಅಜಿತ ಪಿ. ನಾಯ್ಕ
ಅ : ನಾಗೇಂದ್ರ ಸಿ. ನಾಯ್ಕ

**ವಿಷಯ ನಂ: 7** ಶೇಕಡಾ 22.75% ಯೋಜನೆಯಡಿಯಲ್ಲಿ 2010–11 ನೇ ಸಾಲಿಗೆ ಕ್ರೀಯಾ ಯೋಜನೆಯನ್ನು ಸಿದ್ದಪಡಿಸುವ ಕುರಿತು ಚರ್ಚಿಸುವುದು.

**ತರಾವ ನಂ: 7** ಶೇಕಡಾ 22.75% ಯೋಜನೆಯಡಿಯಲ್ಲಿ 2009–10 ನೇ ಸಾಲಿನ ಪಟ್ಟಣ ಪಂಚಾಯತ ನಿಧಿಯಲ್ಲಿ ಬಾಕಿ ಇರುವ ಹಣ ರೂ 0.70 ಲಕ್ಷಗಳಿಗೆ ಹಾಗೂ 2010–11 ನೇ ಸಾಲಿನಲ್ಲಿ ಕಾಯ್ದಿರಿಸಿದ ಅನುದಾನ ರೂ 5.00 ಲಕ್ಷಗಳು ಹೀಗೆ ಒಟ್ಟೂ ಸೇರಿ ರೂ. 5.70 ಲಕ್ಷಗಳಿಗೆ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವ ಪ್ರಕಾರ ಕ್ರೀಯಾ ಯೋಜನೆಯನ್ನು ತಯಾರಿಸಲಾಗಿದ್ದು, ಸದ್ರಿ ಕ್ರೀಯಾ ಯೋಜನೆಯ ವಿವರ ಈ ಕೆಳಗಿನಂತಿದೆ.

| ಅ.ನಂ. | ಕಾರ್ಯಕ್ರಮಗಳ ವಿವರ | ಅಂದಾಜು ರಖಂ (ರೂ. ಲಕ್ಷಗಳಲ್ಲಿ) |
|---|---|---|
| **ಅ.** | **ಶಿಕ್ಷಣ ಅಭಿವೃದ್ದಿ ಕಾರ್ಯಕ್ರಮ:– 40%** | |
| 1 | ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ 11 ಪ್ರಾಥಮಿಕ ಶಾಲೆಗಳಿಗೆ ಆಟದ ಸಾಮಗ್ರಿಗಳನ್ನು ನೀಡುವುದು. | ರೂ 1.00 ಲಕ್ಷ |
| 2 | ಪ.ಜಾತಿ/ಪ.ಪಂ ಫಲಾನುಭವಿಗಳಿಗೆ ಕಂಪ್ಯೂಟರ ತರಬೇತಿಯನ್ನು ನೀಡುವ ಬಗ್ಗೆ. | ರೂ 1.28 ಲಕ್ಷ |
| | **ಒಟ್ಟೂ ರಖಂ** | **ರೂ 2.28 ಲಕ್ಷ** |
| **ಆ** | **ಆರ್ಥಿಕ ಅಭಿವೃದ್ದಿ ಕಾರ್ಯಕ್ರಮ:– 40%** | |
| 1 | ಪ.ಜಾತಿ/ಪ.ಪಂ ಫಲಾನುಭವಿಗಳಿಗೆ ಹೊಲಿಗೆ ತರಬೇತಿ ನೀಡಿ ಹೊಲಿಗೆ ಯಂತ್ರ ನೀಡುವುದು. | ರೂ 2.28 ಲಕ್ಷ |
| | **ಒಟ್ಟೂ ರಖಂ** | **ರೂ 2.28 ಲಕ್ಷ** |
| **ಇ** | **ಇತರೇ ಅಭಿವೃದ್ದಿ ಕಾರ್ಯಕ್ರಮ:– 20%** | |
| 1 | ಕೇಣಿ, ಅಜ್ಜಿಕಟ್ಟಾ ಪ್ರಾಥಮಿಕ ಶಾಲೆಗಳ ಮುಂದಿನ ಗಟಾರಕ್ಕೆ ಸ್ಲ್ಯಾಬನ್ನು ಅಳವಡಿಸುವುದು. | ರೂ 1.14 ಲಕ್ಷ |
| | **ಒಟ್ಟೂ ರಖಂ** | **ರೂ 1.14 ಲಕ್ಷ** |
| | **ಒಟ್ಟೂ ಮೊತ್ತ** | **ರೂ 5.70 ಲಕ್ಷ** |

**ಠರಾವ ನಂ: 7/1** ಶೇಕಡಾ 22.75% ಯೋಜನೆಯಡಿಯಲ್ಲಿ 2009–10 ನೇ ಸಾಲಿನ ಎಸ್.ಎಫ್.ಸಿ ಅನುದಾನದಲ್ಲಿ ಬಾಕಿ ಇರುವ ಹಣ ರೂ 2.77 ಲಕ್ಷಗಳಿಗೆ ಹಾಗೂ 2010–11 ನೇ ಸಾಲಿನಲ್ಲಿ ಮೀಸಲಿಟ್ಟ ಅನುದಾನ ರೂ 44.06 ಲಕ್ಷಗಳು ಹೀಗೆ ಒಟ್ಟೂ ಸೇರಿ ರೂ 46.83 ಲಕ್ಷಗಳಿಗೆ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವ ಪ್ರಕಾರ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದು, ಸದ್ರಿ ಕ್ರೀಯಾ ಯೋಜನೆಯ ವಿವರ ಈ ಕೆಳಗಿನಂತಿದೆ.

| ಅ.ನಂ. | ಕಾರ್ಯಕ್ರಮಗಳ ವಿವರ | ಅಂದಾಜು ರಖಂ (ರೂ. ಲಕ್ಷಗಳಲ್ಲಿ) |
|---|---|---|
| **ಅ.** | **ಶಿಕ್ಷಣ ಅಭಿವೃದ್ದಿ ಕಾರ್ಯಕ್ರಮ:– 40%** | |
| 1 | ಪ್ರಾಥಮಿಕ ಶಾಲೆಯ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಕಂಪ್ಯೂಟರ ಆಪರೇಟರುಗಳಿಗೆ 2010–2011 ನೇ ಸಾಲಿನ ವೇತನಕ್ಕಾಗಿ 11 ಫಲನುಭವಿಗಳಿಗೆ ರೂ. 3000=00 ರಂತೆ ಕನ್ಸಲ್ಟೆನ್ಸಿ ಫೀ ನೀಡುವದು. | ರೂ. 3.96 ಲಕ್ಷ |
| 2 | ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ 11 ಪ್ರಾಥಮಿಕ ಶಾಲೆಗಳಿಗೆ ಬಿಸಿ ಊಟ ತಯಾರಿಸಲು ಪಾತ್ರೆಗಳನ್ನು ಹಾಗೂ ಇತರೇ ಸಾಮಗ್ರಿಗಳನ್ನು ನೀಡುವುದು. | ರೂ 11.00 ಲಕ್ಷ |
| 3 | ಕೇಣಿ, ಪುರ್ಲಕ್ಕಿಬೇಣ, ಹಾಗೂ ಹುಲಿದೇವರವಾಡಾ ಸಮುದಾಯ ಭವನಕ್ಕೆ ವಾಚನಾಲಯದ ಉಪಕರಣ ನೀಡುವದು. | ರೂ 2.77 ಲಕ್ಷ |
| 4 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಪಿಠೋಪಕರಣಗಳನ್ನು ನೀಡುವದು. | ರೂ 1.00 ಲಕ್ಷ |
| | **ಒಟ್ಟೂ ರಖಂ** | **ರೂ 18.73 ಲಕ್ಷ** |
| **ಆ** | **ಆರ್ಥಿಕ ಅಭಿವೃದ್ದಿ ಕಾರ್ಯಕ್ರಮ:– 40%** | |
| 1 | ಪ.ಜಾತಿ/ಪ.ಪಂ. ಫಲಾನುಭವಿಗಳಿಗೆ ಸಿ.ಎಫ್.ಎಲ್. ಬಲ್ಬ ನೀಡುವದು. | ರೂ 1.50 ಲಕ್ಷ |
| 2 | ಪ.ಜಾತಿ/ಪ.ಪಂ. ಫಲಾನುಭವಿಗಳಿಗೆ ಮನೆ ರಿಪೇರಿ ಬಗ್ಗೆ ಸಹಾಯಧನವನ್ನು ನೀಡುವದು. | ರೂ 4.50 ಲಕ್ಷ |
| 3 | ಐದು ಸಮೂದಾಯ ಭವನಗಳಿಗೆ ಒಂದೊಂದು ಟಿ. ವಿ. ನೀಡುವದು. | ರೂ 1.20 ಲಕ್ಷ |
| 4 | 2009–10 ನೇ ಸಾಲಿನಲ್ಲಿ ಅಟೋ ರಿಕ್ಷಾ ಖರೀದಿಸುವ ಬಗ್ಗೆ ಸಹಾಯಧನ ನೀಡುವ ಕುರಿತು ಅರ್ಜಿ ಸಲ್ಲಿಸಿದ ಎರಡು ಜನ ಫಲಾನುಭವಿಗಳಿಗೆ 2010–11 ನೇ ಸಾಲಿನಲ್ಲಿ ಸಹಾಯಧನ ನೀಡುವದು. | ರೂ 0.60 ಲಕ್ಷ |
| 5 | ಪ.ಜಾತಿ/ಪ.ಪಂ. ಮೂರು ವಸತಿ ನಿಲಯಗಳಿಗೆ ಸೋಲಾರ ವಾಟರ್ ಹೀಟರ ಅಳಡಿಸುವದು. | ರೂ 3.53 ಲಕ್ಷ |
| 6 | ಕೇಣಿ ಹಾಗೂ ಕಾಕರಮಠದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ | ರೂ 6.00 ಲಕ್ಷ |
| 7 | ಕೇಣಿ, ಪುರ್ಲಕ್ಕಿಬೇಣ ಹಾಗೂ ಹುಲಿದೇವರವಾಡಾದ ಸಾರ್ವಜನಿಕ ಶೌಚ್ಚಾಲಯಗಳಿಗೆ ನೀರಿನ ವ್ಯವಸ್ಥೆ ಮಾಡುವದು. | ರೂ 1.40 ಲಕ್ಷ |
| | **ಒಟ್ಟೂ ರಖಂ** | **ರೂ 18.73 ಲಕ್ಷ** |
| ಇ | **ಇತರೇ ಅಭಿವೃದ್ದಿ ಕಾರ್ಯಕ್ರಮ:– 20%** | |
| 1 | ಹುಲಿದೇವರವಾಡಾ ಶಾರದಾ ಉತ್ಸವ ಕಟ್ಟಡ ನಿರ್ಮಾಣ | ರೂ 2.95 ಲಕ್ಷ |
| 2 | ಅಜ್ಜಿಕಟ್ಟಾ ಹರಿಜನಕೇರಿ ಕಂಪೌಂಡ ಗೋಡೆ ನಿರ್ಮಾಣ | ರೂ 1.50 ಲಕ್ಷ |
| 3 | ಕೇಣಿ ಪ್ರದೇಶದಲ್ಲಿ ಬಸ್ ತಂಗುದಾಣ ನಿರ್ಮಾಣ | ರೂ 2.50 ಲಕ್ಷ |
| 4 | ಕೇಣಿ ಹಾಗೂ ಅಂಬಾರಕೊಡ್ಲ ಬಾವಿಯನ್ನು ದುರಸ್ಥಿಪಡಿಸುವದು. ಹಾಗೂ ಕಂತ್ರಿ ಹರಿಜನಕೇರಿ ಶಾರದಾ ಉತ್ಸವ ಕಟ್ಟಡಕ್ಕೆ ವೈರಿಂಗ ಹಾಗೂ ಮೀಟರ ಅಳವಡಿಸುವುದು. | ರೂ 2.42 ಲಕ್ಷ |
| | **ಒಟ್ಟೂ ರಖಂ** | **ರೂ 9.37 ಲಕ್ಷ** |
| | **ಒಟ್ಟೂ ಮೊತ್ತ** | **ರೂ 46.83 ಲಕ್ಷ** |

ಸದ್ರಿ ಈ ಮೇಲೆ ವಿವರಿಸಿದ ಕ್ರೀಯಾ ಯೋಜನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಉ.ಕ. ಕಾರವಾರ ರವರಿಂದ ಅನುಮೋದನೆ ಪಡೆದು ಟೆಂಡರ ಕರೆದು ಕಾರ್ಯಕ್ರಮ ಅನುಷ್ಠಾನಗೊಳಿಸುವಂತೆ ಸಭೆಯು ಮಂಜೂರಾತಿಯನ್ನು ನೀಡಿ ಠರಾವನ್ನು ಸರ್ವಾನುಮತದಿಂದ ಅಂಗೀಕರಿಸಿ ಸರ್ವ ಸದಸ್ಯರ ಒಪ್ಪಿಗೆಯನ್ನು ಪಡೆಯಲಾಯಿತು.

ಸೂ : ಅರುಣ ಡಿ. ನಾಡಕರ್ಣಿ

ಅ : ಭಾಸ್ಕರ ಕೆ. ನಾರ್ವೇಕರ

ವಿಷಯ ನಂ. 08 ಎ.ಡಿ.ಬಿ ಲೋನ ನಂ. 1704 IND KUDCEMP ಡಿಮಾಂಡ ನೋಟಿಸು ದಿನಾಂಕ: 31/3/2010 ರಂತೆ ಅಸಲು ಮತ್ತು ಬಡ್ಡಿ ಸೇರಿ 35.54 ಲಕ್ಷ ಸಾಲ ಮರುಪಾವತಿ ಮಾಡುವ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

ಠರಾವ ನಂ. 08 ಏಶಿಯನ ಡೆವಲಪೆಂಟ ಬ್ಯಾಂಕಿನ ಸಾಲದ ಕುರಿತು ಡಿಮಾಂಡ ನೋಟಿಸು ನಂ. 1704 IND KUDCEMP ದಿನಾಂಕ: 31/3/2010 ರಂತೆ ಅಸಲು ಮತ್ತು ಬಡ್ಡಿ ಸೇರಿ 35.54 ಲಕ್ಷ ಸಾಲ ಮರುಪಾವತಿ ಮಾಡುವ ಬಗ್ಗೆ ಬಂದ ಪತ್ರವನ್ನು ಸಭೆಯಲ್ಲಿ ಮಂಡಿಸಲಾಯಿತು. ಈ ಕುರಿತು ಈಗಾಗಲೇ ಆಯ–ವ್ಯಯದಲ್ಲಿ ಸಾಲ ಮರು ಪಾವತಿಯ ಬಗ್ಗೆ ಅನುದಾನ ಕಾಯ್ದಿರಿಸಿದ್ದು ಸದ್ರಿ ಸಾಲ ಮತ್ತು ಬಡ್ಡಿ ಹಣವನ್ನು ಸರಕಾರದ ಅನುದಾನದಿಂದ ಬರಪಾಯಿ ಮಾಡುವಂತೆ ಸರಕಾರಕ್ಕೆ ಪ್ರಸ್ಥಾವನೆಯನ್ನು ಸಲ್ಲಿಸುವಂತೆ ಠರಾವು ಪಾಸು ಮಾಡಲಾಯಿತು.

ಸೂ : ಕೃಷ್ಣಕುಮಾರ ಮಹಾಲೆ
ಅ : ಬಿ.ಎ ಮಹಾಲಕ್ಷ್ಮೀ ಲಕ್ಷ್ಮೀನರಸಯ್ಯ

ವಿಷಯ ನಂ. 09 ಪಟ್ಟಣ ಪಂಚಾಯತದಲ್ಲಿ ಹಣದ ಲಭ್ಯತೆ ಇಲ್ಲದೆ ಇರುವುದರಿಂದ ದಾರಿದೀಪಗಳ ಬಗ್ಗೆ ಹೆಚ್ಚುವರಿ ಇರುವ ಹಣವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರವಾರ ಇವರಿಗೆ ಸದರ ಖಾತೆಯಿಂದ ರೂ. 15.00 ಲಕ್ಷ ಪಾವತಿ ಮಾಡಲು ಮಂಜೂರಿ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ಥಾವನೆ ಸಲ್ಲಿಸುವ ಕುರಿತು ಮಂಜೂರಿ ನೀಡುವುದು.

ಠರಾವ ನಂ. 09 ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒ.ಚ. ಮಂಡಳಿ ಕಾರವಾರ ಇವರ ಪತ್ರವನ್ನು ಸಭೆಯಲ್ಲಿ ಮಂಡಿಸಲಾಯಿತು. ಈ ಬಗ್ಗೆ ಸಭೆಯಲ್ಲಿ ವ್ಯಾಪಕವಾಗಿ ಚರ್ಚಿಸಲಾಗಿ ಈ ಪಟ್ಟಣ ಪಂಚಾಯತ ವತಿಯಿಂದ ಕುಡಿಯುವ ನೀರಿನ ಬಾಬ್ತು ದಿನಾಂಕ: 31–3–2010 ರವರೆಗೆ ಕ.ನ.ನೀ.ಸ ಮಂಡಳಿಗೆ ರೂ. 53.97 ಲಕ್ಷ ಪಾವತಿ ಮಾಡುವುದು ಬಾಕಿ ಇರುವುದರಿಂದ ಸದರ ಹಣವನ್ನು ಕೂಡಲೇ ಪಾವತಿ ಮಾಡಲು ತಿಳಿಸಿದ ಪ್ರಕಾರ ಹಾಗೂ ಕ.ನ.ನೀ.ಸ ಮಂಡಳಿಯವರು ಹೆಸ್ಕಾಂ ಇಲಾಖೆಗೆ ಕುಡಿಯುವ ನೀರಿನ ವಿದ್ಯುಚ್ಛಕ್ತಿ ಬಿಲ್ಲು ಪಾವ್ತಿಸುವುದು ಬಾಕಿ ಇರುವುದರಿಂದ ಯಾವುದೇ ಸಂದರ್ಭದಲ್ಲಿ ಹೆಸ್ಕಾಂ ಇಲಾಖೆಯವರು ವಿದ್ಯುಚ್ಛಕ್ತಿ ನಿಲ್ಲಿಸುವ ಸಾಧ್ಯತೆ ಇದ್ದು ನೀರು ಸರಬರಾಜು ಬಂದಾಗುವ ಸಾಧ್ಯತೆ ಇರುವದರಿಂದ ಕೂಡಲೇ ಕುಡಿಯುವ ನೀರಿನ ಬಾಕಿ ಪಾವ್ತಿ ಮಾಡಲು ತಿಳಿಸಿರುತ್ತಾರೆ. ಆದರೆ ಪಟ್ಟಣ ಪಂಚಾಯತದಲ್ಲಿ ಯಾವುದೇ ಖಾತೆಯಲ್ಲಿ ಹಣದ ಲಭ್ಯತೆ ಇರದೆ ಇರುವುದರಿಂದ ದಾರಿದೀಪಗಳ ವಿದ್ಯುತ ಬಿಲ್ಲು ಪಾವತಿ ಮಾಡುವ ಕುರಿತು ಬಿಡುಗಡೆ ಆಗುವ ಅನುದಾನದಲ್ಲಿ ಶಿಲ್ಕು ಇರುವ ಅನುದಾನದಿಂದ ಸದ್ಯಕ್ಕೆ ರೂ. 10.00 ಲಕ್ಷ ಹಣವನ್ನು ನೀರು ಸರಬರಾಜು ಮಂಡಳಿಗೆ ಪಾವತಿಸಲು ಬಾಕಿ ಇರುವ ಹಣಕ್ಕೆ ಪ್ರತಿಯಾಗಿ ವಿದ್ಯುತ ಶಕ್ತಿ ಮಂಡಳಿಗೆ ಪಾವತಿಸಲು ಒಪ್ಪಿಗೆ ನೀಡಿ ಠರಾವ ಪಾಸು ಮಾಡಲಾಯಿತು.

ಸೂ : ಭಾಸ್ಕರ ಕೆ. ನಾರ್ವೇಕರ
ಅ : ನಾಗೇಂದ್ರ ಸಿ. ನಾಯ್ಕ

ವಿಷಯ ನಂ. 10 ನೈರ್ಮಲ್ಯ ವಿಭಾಗದ ಉಪಯೋಗಕ್ಕಾಗಿ 2010–2011 ನೇ ಸಾಲಿಗಾಗಿ ಅವಶ್ಯವಿರುವ ಬ್ಲೀಚಿಂಗ ಪೌಡರ ಹಾಗೂ ಫಿನೈಲ ಖರೀದಿಸುವ ಕುರಿತು ಮಂಜೂರಿ ನೀಡುವುದು.

ಠರಾವ ನಂ. 10 ನೈರ್ಮಲ್ಯ ವಿಭಾಗಕ್ಕೆ 2010–2011 ನೇ ಸಾಲಿಗಾಗಿ ಅವಶ್ಯ ಇರುವ ಬ್ಲೀಚಿಂಗ ಪೌಡರ ಹಾಗೂ ಫಿನೈಲ್ ಖರೀದಿಸುವ ಕುರಿತು ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಫಿನೈಲ ಮತ್ತು ಬ್ಲೀಚಿಂಗ ಪೌಡರಗಳನ್ನು ದರವಾರು ಕರೆದು ಕಡಿಮೆ ದರ ಸಲ್ಲಿಸಿದ ಮಾರಾಟಗಾರರಿಗೆ ಮಂಜೂರಿ ಮಾಡಿ ಹಾಗೂ ಹಣ ಸಂದಾಯಿಸುವ ಅಧಿಕಾರ ಮುಖ್ಯಾಧಿಕಾರಿಗಳಿಗೆ ನೀಡಿತು. ಹಾಗೂ ಸದ್ಯಕ್ಕೆ 3 ತಿಂಗಳಿಗೆ ಅವಶ್ಯ ಇರುವಷ್ಟು ಮಾತ್ರ ಖರೀದಿಸುವಂತೆ ಸಭೆಯು ಮಂಜೂರಾತಿಯನ್ನು ನೀಡಿ ಠರಾವು ಪಾಸು ಮಾಡಲಾಯಿತು.

ಸೂ : ಸುಮಿತಾ ಪಿ. ನಾಯಕ
ಅ : ಬಿ.ಎ ಮಹಾಲಕ್ಷ್ಮೀ ಲಕ್ಷ್ಮೀನರಸಯ್ಯ

ವಿಷಯ ನಂ. 11 ಕಚೇರಿ ವಾಹನಕ್ಕೆ ಉಪಯೋಗಿಸಿದ ಮಾರ್ಚ ಮತ್ತು ಎಪ್ರಿಲ್ 2010 ರ ತಿಂಗಳ ಇಂಧನ ಬಿಲ್ಲುಗಳನ್ನು ಸಭೆಯ ಮಂಜೂರಾತಿ ನಿರೀಕ್ಷಣೆಯ ಮೇಲೆ ಪಾವತಿಸಿದಕ್ಕೆ ಅನುಮೋದನೆ ನೀಡುವ ಕುರಿತು.

ಠರಾವ ನಂ. 11 ಕಚೇರಿಯ ವಾಹನಕ್ಕೆ ಉಪಯೋಗಿಸಿದ ಮಾರ್ಚ ಮತ್ತು ಎಪ್ರಿಲ್ 2010 ನೇ ತಿಂಗಳ ಇಂಧನ ಬಿಲ್ಲು ರೂ. 33,136=00 (ರೂ. ಮೂವತ್ಮೂರು ಸಾವಿರದ ಒಂದು ನೂರಾ ಮೂವತ್ತಾರು ಮಾತ್ರ) ಸಂದಾಯ ಮಾಡಿದ ಬಗ್ಗೆ ಸಭೆಯಲ್ಲಿ ಮಂಡಿಸಲಾಯಿತು. ಈ ಬಗ್ಗೆ ಸದ್ರಿ ಇಂಧನ ಬಿಲ್ಲುಗಳನ್ನು ಸಂದಾಯ ಮಾಡಲು ಸಭೆಯು ಒಪ್ಪಿಗೆಯನ್ನು ನೀಡಿ ಮುಂದಿನ ಇಂಧನ ಬಿಲ್ಲುಗಳನ್ನು ಅಧ್ಯಕ್ಷರ ಒಪ್ಪಿಗೆಯನ್ನು ಪಡೆದು ಸಂದಾಯಿಸಲು ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ : ಬಿ.ಎ ಮಹಾಲಕ್ಷ್ಮೀ ಲಕ್ಷ್ಮೀನರಸಯ್ಯ
ಅ : ಸುಮಿತಾ ಪಿ. ನಾಯಕ

ವಿಷಯ ನಂ. 12 ಸರ್ಕಾರದ ನಿರ್ದೇಶನದ ಅನ್ವಯ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶದಲ್ಲಿ ಇರುವ ಕುಟುಂಬಗಳ ಸಮೀಕ್ಷೆ ಕೈ ಕೊಂಡಿರುವ ಬಗ್ಗೆ ಗಣತಿದಾರರಿಗೆ ಹಾಗೂ ಡಾಟಾ ಎಂಟ್ರಿ ಕಾರ್ಯಕ್ಕೆ ತಗಲುವ ವೆಚ್ಚವನ್ನು ಪಟ್ಟಣ ಪಂಚಾಯತ ನಿಧಿಯಿಂದ ಭರಿಸುವ ಕುರಿತು.

ಠರಾವ ನಂ. 12 ಸರ್ಕಾರದ ನಿರ್ದೇಶನದಂತೆ ಪಟ್ಟಣ ಪಂಚಾಯತದ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶದಲ್ಲಿ ಇರುವ ಕುಟುಂಬಗಳ ಸಮೀಕ್ಷೆ ಕೈಗೊಂಡಿರುವ ಬಗ್ಗೆ ಹಾಗೂ ಗಣತಿದಾರರಿಗೆ ಹಾಗೂ ಡಾಟಾ ಎಂಟ್ರಿಯನ್ನು ಮಾಡುವವರಿಗೆ ಪಟ್ಟಣ ಪಂಚಾಯತ ನಿಧಿಯಿಂದ ಸಂದಾಯ ಮಾಡುವ ಬಗ್ಗೆ ಪೌರಾಡಳಿತ ನಿರ್ದೇಶಕರಿಂದ ಬಂದ ಪತ್ರವನ್ನು ಸಭೆಯ ಗಮನಕ್ಕೆ ತರಲಾಯಿತು. ಸದ್ರಿ ಸಮೀಕ್ಷೆ ಮಾಡಿದ ಗಣತಿದಾರರಿಗೆ ಮತ್ತು ಡಾಟಾ ಎಂಟ್ರಿ ಏಜನ್ಸಿಯವರಿಗೆ ಪಟ್ಟಣ ಪಂಚಾಯತ ನಿಧಿಯಿಂದ ಹಣ ಸಂದಾಯಿಸುವ ಬಗ್ಗೆ ಒಪ್ಪಿಗೆಯನ್ನು ನೀಡಿತು. ಸರಕಾರದಿಂದ ಅನುದಾನ ಬಿಡುಗಡೆಯಾದ ತರುವಾಯ ಮರು ಹೊಂದಾಣಿಕೆ ಮಾಡುವಂತೆ ಸಭೆಯು ಒಪ್ಪಿಗೆ ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ : ಬಿ.ಎ ಮಹಾಲಕ್ಷ್ಮೀ ಲಕ್ಷ್ಮೀನರಸಯ್ಯ
ಅ : ಅಜಿತ ಪಿ. ನಾಯ್ಕ

ವಿಷಯ ನಂ. 13 ಮಟನ ಸ್ಟಾಲುಗಳಿಗೆ ಟೆಂಡರ ಕಮ್ ಆಕ್ಷನ ಮಾಡಿ ಬಂದ ದರವನ್ನು ಪರಿಶೀಲಿಸಿ ಮಂಜೂರಿ ನೀಡುವುದು.

ಠರಾವ ನಂ. 13 ಪಟ್ಟಣ ಪಂಚಾಯತ ಮಾಲೀಕತ್ವದ ಮಟನ ಸ್ಟಾಲ ನಂ. 1 ಹಾಗೂ 3ನೇದಕ್ಕೆ ದಿನಾಂಕ: 20/5/2010 ರಂದು ಟೆಂಡರ ಕಮ್ ಆಕ್ಷನ ಮಾಡಲಾಗಿದ್ದು, ಅದರಲ್ಲಿ ಮಟನ ಸ್ಟಾಲ ನಂ. 1 ನೇದಕ್ಕೆ ಶ್ರೀ ಬಾಲಕೃಷ್ಣ ನಾಗರಾಜ ಕಲಾಲ್ ಇವರು ಸಲ್ಲಿಸಿರುವ ಪ್ರತಿ ತಿಂಗಳ ಬಾಡಿಗೆ ರೂ. 3750=00 (ಮೂರು ಸಾವಿರದ ಏಳು ನೂರಾ ಐವತ್ತು ಮಾತ್ರ) ಮತ್ತು ಸ್ಟಾಲ ನಂ. 3 ನೇದಕ್ಕೆ ಶ್ರೀ ಗಣಪತಿ ಶಂಕ್ರಪ್ಪ ಕಲಾಲ್ ಇವರು ಸಲ್ಲಿಸಿದ ದರ ಪ್ರತಿ ತಿಂಗಳ ರೂ. 5525=00 (ಐದು ಸಾವಿರದ ಐದು ನೂರು ಇಪ್ಪತ್ತೈದು ಮಾತ್ರ) ಸಭೆಯಲ್ಲಿ ಓದಿ ಹೇಳಲಾಯಿತು. ಈ ದರವು ಕಳೆದ ವರ್ಷಕ್ಕಿಂತ ಹೆಚ್ಚಿಗೆ ಇದ್ದು ಸಮಧಾನಕರವಾಗಿರುವುದರಿಂದ ಮಂಜೂರಿ ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ಸೂ : ಅಜಿತ ಪಿ. ನಾಯ್ಕ
ಅ : ನಾಗೇಂದ್ರ ಸಿ. ನಾಯ್ಕ

ವಿಷಯ ನಂ. 14 ಪಟ್ಟಣ ಪಂಚಾಯತ ವತಿಯಿಂದ ನೀರು ಸರಬರಾಜು ಮಾಡುವ ಟ್ಯಾಂಕರ ನಾದುರಸ್ಥಿಗೆ ಬಂದಿರುವುದರಿಂದ ಹಾಗೂ ಟ್ಯಾಂಕರ ವಾಹನ ಚಾಲಕರ ಕೊರತೆ ಇರುವುದರಿಂದ ತುರ್ತಾಗಿ ಸರ್ಕಾರಿ ದವಾಖಾನೆ ಹಾಗೂ ನಗರ ಪ್ರದೇಶದ ಅವಶ್ಯ ಇರುವ ಕಡೆಗಳಲ್ಲಿ ಖಾಸಗಿ ಟ್ಯಾಂಕರ ಪಡೆದು 15 ದಿನ ನೀರು ಸರಬರಾಜು ಮಾಡುವ ಕುರಿತು ಮಂಜೂರಿ ನೀಡುವುದು.

ಠರಾವ ನಂ. 14 ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಪಟ್ಟಣ ಪಂಚಾಯತ ಟ್ಯಾಂಕರ ನಾದುರಸ್ಥಿಗೆ ಬಂದಿರುವುದರಿಂದ ಹಾಗೂ ಟ್ಯಾಂಕರ ವಾಹನ ಚಾಲಕರು ಕೇಂದ್ರದಲ್ಲಿ ಇಲ್ಲದೇ ಇರುವುದರಿಂದ ಸರ್ಕಾರಿ ದವಾಖಾನೆ ಹಾಗೂ ನಗರ ಪ್ರದೇಶದ ಅವಶ್ಯ ಸ್ಥಳಗಳಲ್ಲಿ ಖಾಸಗಿ ಟ್ಯಾಂಕರ ಪಡೆದು 15 ದಿವಸದ ಅವಧಿಗೆ ನೀರು ಸರಬರಾಜು ಮಾಡುವ ಬಗ್ಗೆ ವಿಷಯವನ್ನು ಸಭೆಯಲ್ಲಿ ಮಂಡಿಸಲಾಯಿತು. ಸಭೆಯು ನಗರ ಪ್ರದೇಶದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಬರದ ಹಾಗೆ ಸುಧಾಕರ ಎಚ್. ಸೋನ್ಸ ಇವರ ಟ್ಯಾಂಕರ ಮುಖಾಂತರ ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು ಸಭೆಯು ಒಪ್ಪಿಗೆ ನೀಡಿತು. ಹಾಗೂ ಸದ್ರಿಯವರ ಬಿಲ್ಲು ಪಾವ್ತಿ ಮಾಡಲು ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ ಠರಾವು ಪಾಸು ಮಾಡಲಾಯಿತು.

ವಿಷಯ ನಂ. 15 ಪಟ್ಟಣ ಪ್ರದೇಶದ ಪಟ್ಟಣ ಪಂಚಾಯತ ಮಾಲೀಕತ್ವದ ಆನಂದಗಿರಿ ಸಾರ್ವಜನಿಕ ಬಾವಿಗೆ ಹೆಚ್ಚುವರಿಯಾಗಿ ಏಳು ರಿಂಗ ಅಳವಡಿಸಿ ಪ್ಲಾಟಫಾರ್ಮಗಳನ್ನು ದುರಸ್ಥಿಪಡಿಸಿ ಗಡಗಡೆ ಕೂಡ್ರಿಸುವ ಕುರಿತು ಒಪ್ಪಿಗೆ ನೀಡುವುದು.

ಠರಾವ ನಂ. 15 ಪಟ್ಟಣ ಪ್ರದೇಶದ ಆನಂದಗಿರಿ ಸಾರ್ವಜನಿಕ ಬಾವಿಗೆ ಹೆಚ್ಚುವರಿಯ 7 ರಿಂಗನ್ನು ಅಳವಡಿಸುವ ಬಗ್ಗೆ ಹಾಗೂ ಬಾವಿಗೆ ಪ್ಲಾಟಫಾರಂನ್ನು ದುರಸ್ಥಿಪಡಿಸಿ ಗಡಗಡೆ ಅಳವಡಿಸುವ ಬಗ್ಗೆ ತಯಾರಿಸಿದ ಅಂದಾಜು ಪತ್ರಿಕೆ ರೂ. 50,000=00 ಕ್ಕೆ ಮಂಜೂರಾತಿ ನೀಡುವ ಬಗ್ಗೆ ಮಂಡಿಸಿದ ವರದಿಯಂತೆ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಕಾಮಗಾರಿಯು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಸಭೆಯು ಒಪ್ಪಿಗೆಯನ್ನು ನೀಡಿ ಕಾನೂನಿನಂತೆ ಕ್ರಮಕೈಗೊಳ್ಳುವಂತೆ ಮುಖ್ಯಾಧಿಕಾರಿಗಳಿಗೆ ಅಧಿಕಾರವನ್ನು ನೀಡಿ ಸರ್ವಾನುಮತದಿಂದ ಠರಾವು ಪಾಸು ಮಾಡಲಾಯಿತು.

ವಿಷಯ ನಂ. 16 ಪಟ್ಟಣ ಪಂಚಾಯತ ಅಂಕೋಲಾಕ್ಕೆ ಸಂಬಂಧಿಸಿದ ವಿದ್ಯುತ ಸರಬರಾಜು ಬಿಲ್ಲುಗಳನ್ನು ಮಂಜೂರಿ ನಿರೀಕ್ಷಣೆಯ ಮೇರೆಗೆ ಪಾವತಿ ಮಾಡಿರುವ ವಿದ್ಯುತ ಬಿಲ್ಲು ರೂ. 21933=00 ಪರಿಶೀಲಿಸಿ ಮಂಜೂರಿ ನೀಡುವುದು.

ಠರಾವ ನಂ. 16 ಪಟ್ಟಣ ಪಂಚಾಯತನ ವ್ಯಾಪ್ತಿಯಲ್ಲಿನ ಕಟ್ಟಡಗಳ ವಿದ್ಯುತ ಬಿಲ್ಲುಗಳನ್ನು ಸಂದಾಯ ಮಾಡುವ ಬಗ್ಗೆ ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿ ಈ ಬಗ್ಗೆ ಸದ್ರಿ ವಿಷಯದ ಮೇಲೆ ಸುಧೀರ್ಘವಾಗಿ ಚರ್ಚಿಸಲಾಗಿ ಸದ್ರಿ ವಿದ್ಯುತ ಬಿಲ್ಲು ರೂ. 21933=00 ಸಂದಾಯ ಮಾಡುವ ಬಗ್ಗೆ ಒಪ್ಪಿಗೆಯನ್ನು ನೀಡಲಾಯಿತು. ಹಾಗೂ ಮುಂದಿನ ಪ್ರತಿ ತಿಂಗಳು ವಿದ್ಯುತ ಬಿಲ್ಲುಗಳನ್ನು ಅಧ್ಯಕ್ಷರ ಒಪ್ಪಿಗೆಯನ್ನು ಪಡೆದು ಸಂದಾಯ ಮಾಡಲು ಮುಖ್ಯಾಧಿಕಾರಿಗಳಿಗೆ ಅಧಿಕಾರವನ್ನು ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ವಿಷಯ ನಂ. 17 ಕುಮಟಾದಲ್ಲಿ ದಿನಾಂಕ: 27–3–2010 ರಿಂದ 28–3–2010 ರಂದು ಜರುಗಿದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವಂತಿಗೆ ನೀಡುವ ಬಗ್ಗೆ ಬಂದ ಪತ್ರ ಪರಿಶೀಲಿಸಿ ಕ್ರಮ ಕೈಗೊಳ್ಳುವುದು.

ಠರಾವ ನಂ. 17 ಕುಮಟಾದಲ್ಲಿ ದಿನಾಂಕ: 27–3–2010 ರಿಂದ 28–3–2010 ರಂದು ಜರುಗಿದ ಸಾಹಿತ್ಯ ಸಮ್ಮೇಳನಕ್ಕೆ ವಂತಿಗೆಯನ್ನು ನೀಡುವ ಬಗ್ಗೆ ವಿಷಯವನ್ನು ಸಭೆಯಲ್ಲಿ ಪ್ರಸ್ಥಾಪಿಸಲಾಗಿ ಈ ಬಗ್ಗೆ ಸರ್ಕಾರದ ಆದೇಶದಂತೆ ವಂತಿಗೆಯನ್ನು ನೀಡಬೇಕಾಗಿದ್ದು ಪಟ್ಟಣ ಪಂಚಾಯತ ನಿಧಿಯಿಂದ ರೂ. 2000=00 ವಂತಿಗೆಯನ್ನು ನೀಡುವಂತೆ ಸಭೆಯ ಒಪ್ಪಿಗೆಯನ್ನು ನೀಡಿ ಠರಾವು ಪಾಸು ಮಾಡಲಾಯಿತು.

## <u>ಮಾನ್ಯ ಅಧ್ಯಕ್ಷರ ಅನುಮತಿಯ ಮೇರೆಗೆ ಬರಬಹುದಾದ ಇತರೆ ವಿಷಯಗಳು</u>

ವಿಷಯ ನಂ. 18/1 ಮಳೆಗಾಲದ ಗಟಾರದ ಮಣ್ಣನ್ನು ಹೂಳೆತ್ತುವ ಬಗ್ಗೆ ಕ್ರಮ ಜರುಗಿಸುವುದು.

ಠರಾವ ನಂ. 18 ಮಳೆಗಾಲದ ಗಟಾರದ ಮಣ್ಣನ್ನು ಹೂಳೆತ್ತುವ ಬಗ್ಗೆ ಕ್ರಮ ಕೈಗೊಳ್ಳವುದರ ಬಗ್ಗೆ ವಿಷಯವನ್ನು ಸಭೆಯಲ್ಲಿ ಪ್ರಸ್ಥಾಪಿಸಲಾಗಿ ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಗಿ ಮಳೆಗಾಲದ ಪೂರ್ವದಲ್ಲಿ ಎಲ್ಲಾ ಗಟಾರದ ಮಣ್ಣನ್ನು ಹೂಳೆತ್ತೆಬೇಕಾಗಿರುವುದರಿಂದ ಈ ಬಗ್ಗೆ ಸ್ಥಳೀಯ ಗುತ್ತಿಗೆದಾರರಿಂದ ತುಂಡು ಗುತ್ತಿಗೆ ಆಧಾರದಲ್ಲಿ ಕಾಮಗಾರಿಯನ್ನು ನಿರ್ವಹಿಸಿಕೊಳ್ಳುವಂತೆ ಸಭೆಯು ಮಂಜೂರಾತಿಯನ್ನು ನೀಡಿತು. ಹಾಗೂ ಈ ಬಗ್ಗೆ ಪ್ರತಿ ರಸ್ತೆಗೆ ಅನುಗುಣವಾಗಿ ಅಂದಾಜು ಪತ್ರಿಕೆಯನ್ನು ತಯಾರಿಸಿ ಕಾಮಗಾರಿಯನ್ನು ನಿರ್ವಹಿಸಲು ಸಭೆಯು ಒಪ್ಪಿಗೆಯನ್ನು ನೀಡಿ ಹಣ ಸಂದಾಯಿಸಲು ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

ವಿಷಯ ನಂ. 18/2 ಸರ್ವೆ ನಂ. 498 ರಲ್ಲಿ ವಾಣಿಜ್ಯ ಮಳಿಗೆಯನ್ನು ನಿರ್ಮಿಸುವ ಬಗ್ಗೆ.

ಠರಾವ ನಂ. 19 CMSMTDP ಯೋಜನೆಯಡಿಯಲ್ಲಿ ಸರ್ವೆ ನಂ. 498 ರಲ್ಲಿ ವಾಣಿಜ್ಯ ಮಳಿಗೆಯನ್ನು ನಿರ್ಮಿಸುವ ಬಗ್ಗೆ ಕ್ರಿಯಾಯೋಜನೆಗೆ ಒಪ್ಪಿಗೆಯನ್ನು ನೀಡಿರುವಂತೆ ಕಾಮಗಾರಿಯನ್ನು ಪ್ರಾರಂಭಿಸುವ ಹಂತದಲ್ಲಿ ಕೆಲಸವನ್ನು ಸ್ಥಗಿತದಲ್ಲಿ ಇಡುವ ಬಗ್ಗೆ ಅಧ್ಯಕ್ಷರು ಅಂಜುಮನ ಎ ಇಸ್ಲಾಂ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಗಿ ಈ ಕಾಮಗಾರಿಯನ್ನು ಬದಲಾವಣೆ ಮಾಡಿ ಬೇರೆ ಸ್ಥಳದಲ್ಲಿ ವಾಣಿಜ್ಯ ಮಳಿಗೆಯನ್ನು ನಿರ್ಮಿಸುವ ಬಗ್ಗೆ ಸಭೆಯು ಅಭಿಪ್ರಾಯಪಟ್ಟಿತು. ಈ ಕುರಿತು ಪಟ್ಟಣ ಪಂಚಾಯತ ಮಾಲೀಕತ್ವದ ಶೇಡಗೇರಿ ಸ.ನಂ. 5ಅನೇದರಲ್ಲಿ ಇರುವ ಜಿಲ್ಲಾ ಪರಿಷತ್ ಇಂಜಿನಿಯರಿಂಗ ಕಟ್ಟಡದ ಎದುರಿನ ಖುಲ್ಲಾ ಜಾಗೆಯಲ್ಲಿ ವಾಣಿಜ್ಯ ಮಳಿಗೆಯನ್ನು ನಿರ್ಮಿಸುವ ಬಗ್ಗೆ ಸ್ಥಳ ಬದಲಾವಣೆಯ ಬಗ್ಗೆ ಪ್ರಸ್ಥಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವ ಬಗ್ಗೆ ಸಭೆಯು ಒಪ್ಪಿಗೆಯನ್ನು ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು.

| | |
|---|---|
| ವಿಷಯ ನಂ. 18/3 | ಪ್ಯಾಕೇಜ ನಂ. 13 ಮತ್ತು 18 ನೇದರ ಮಂಜೂರಿ ಕುರಿತು ಮಾನ್ಯ ಯೋಜನಾ ನಿರ್ದೇಶಕರು ಜಿಲ್ಲಾಧಿಕಾರಿಗಳ ಕಚೇರಿ ಕಾರವಾರ ರವರಿಂದ ಬಂದ ಪತ್ರದ ಬಗ್ಗೆ ಚರ್ಚಿಸುವುದು. |
| ಠರಾವ ನಂ. 20 | ಎಸ್.ಎಫ.ಸಿ ಯೋಜನೆ ಅಡಿಯಲ್ಲಿ ಕರೆದ ಕಾಮಗಾರಿಗಳ ಟೆಂಡರ ಪ್ಯಾಕೇಜ ನಂ. 13 ಮತ್ತು 18 ನೇದಕ್ಕೆ ಈ ಕೆಳಗಿನಂತೆ ಟೆಂಡರುಗಳು ಸ್ವೀಕೃತವಾಗಿರುತ್ತದೆ. |

| ಅ.ನಂ. | ಪ್ಯಾಕೇಜ ನಂ. | ಟೆಂಡರ ಸಲ್ಲಿಸಿದವರ ಹೆಸರು | ದರ | ಶರಾ |
|---|---|---|---|---|
| 1 | ಪ್ಯಾಕೇಜ ನಂ. 13 | ಮಂಜುನಾಥ ಎಲ್. ನಾಯ್ಕ | ಶೇಕಡಾ 15.22 ಕಡಿಮೆ | |
| | | ಹರೀಶ ಆರ್. ನಾಯ್ಕ | ಅಂದಾಜು ಪತ್ರಿಕೆ ದರದಂತೆ | |
| 2. | ಪ್ಯಾಕೇಜ ನಂ. 18 | ಮಂಜುನಾಥ ಎಲ್. ನಾಯ್ಕ | ಶೇ. 15.90 ಕಡಿಮೆ | |
| | | ವೆಂಕಟರಮಣ ವಿ. ನಾಯ್ಕ | ಶೇ. 14.37 ಕಡಿಮೆ | |

ಈ ಮೇಲಿನ ಎರಡು ಪ್ಯಾಕೇಜುಗಳಲ್ಲಿ ಗುತ್ತಿಗೆದಾರರಾದ ಶ್ರೀ ಮಂಜುನಾಥ ಎಲ್. ನಾಯ್ಕ ರವರು ಸಲ್ಲಿಸಿದ ದರವು ಕಡಿಮೆ ಇರುತ್ತದೆ. ಸದ್ರಿಯವರು L1 ಆಗಿರುತ್ತಾರೆ. ಆದರೆ ಸದ್ರಿ ಗುತ್ತಿಗೆದಾರರು ಈ ಹಿಂದೆ ಈ ಪಟ್ಟಣ ಪಂಚಾಯತದಿಂದ ಟೆಂಡರ ಪಡೆದು ನಿರ್ವಹಿಸಿರುವ ಕಾಮಗಾರಿಗಳು ಸಮರ್ಪಕವಾಗಿರದೇ ಇರುವುದರಿಂದ ಠರಾವು ನಂ. 159 ದಿನಾಂಕ: 29/7/2009 ನೇದರಂತೆ ಅವರ ಟೆಂಡರನ್ನು ರದ್ದುಪಡಿಸಿ ಹಾಗೂ ಇನ್ನು ಮುಂದೆ ಸದ್ರಿಯವರಿಗೆ ಈ ಪಟ್ಟಣ ಪಂಚಾಯತದಿಂದ ಯಾವುದೇ ಕಾಮಗಾರಿಯನ್ನು ನೀಡದಂತೆ ಹಾಗೂ ಸದ್ರಿಯವರ ಗುತ್ತಿಗೆ ಲೈಸನ್ಸನ್ನು ರದ್ದುಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರಸ್ಥಾವನೆ ಸಲ್ಲಿಸುವಂತೆ ನಿರ್ಣಯಿಸಿದ್ದು ಇರುತ್ತದೆ. ಅಲ್ಲದೇ ಸದ್ರಿ ಪ್ಯಾಕೇಜ ನಲ್ಲಿ L2 ಆಗಿರುವ ಗುತ್ತಿಗೆದಾರರು ತಾವು L1 ಗುತ್ತಿಗೆದಾರರು ನಮೂದಿಸಿದ ದರಕ್ಕೆ ಈ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುವ ಬಗ್ಗೆ ಲಿಖಿತವಾಗಿ ಒಪ್ಪಿಗೆ ಪತ್ರವನ್ನು ಸಲ್ಲಿಸಿರುತ್ತಾರೆ. ಈಗ ಮಾನ್ಯ ಯೋಜನಾ ನಿರ್ದೇಶಕರಿಂದ ಬಂದ ಪತ್ರದ ಕುರಿತು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ಹಾಗೂ ಈಗಾಗಲೇ ನಿರ್ಣಯಿಸಿ ಠರಾವು ಪಾಸು ಮಾಡಿರುವಂತೆ ಹಾಗೂ ಟೆಂಡರ ಪ್ರಕಟಣೆಯ ಶರ್ತು ನಂ. 10 ಹಾಗೂ 12 ರಲ್ಲಿ ಯಾವುದೇ ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ಮುಂದೂಡುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಈ ಪಟ್ಟಣ ಪಂಚಾಯತಿಯು ಕಾಯ್ದಿರಿಸಿ ಕೊಂಡಿರುವ ಅಧಿಕಾರದ ಮೇರೆಗೆ L1 ಗುತ್ತಿಗೆದಾರರಾದ ಶ್ರೀ ಮಂಜುನಾಥ ಎಲ್. ನಾಯ್ಕ ಇವರ ಟೆಂಡರುಗಳನ್ನು ಸಭೆಯು ರದ್ದುಪಡಿಸಿ ನಿರ್ಣಯಿಸಲಾಯಿತು. ಹಾಗೂ ಸದ್ರಿಯವರ ಟೆಂಡರನ್ನು ರದ್ದುಪಡಿಸಿರುವುದರಿಂದ ಸದ್ರಿ ಕಾಮಗಾರಿಗಳಿಗೆ ಒಂದೇ ಟೆಂಡರು ಸ್ವೀಕೃತವಾದಂತಾಗಿದ್ದು ಒಂದೇ ಟೆಂಡರ ಸ್ವೀಕೃತವಾದಲ್ಲಿ ಅದನ್ನು ಮಂಜೂರಿ ಮಾಡುವ ಅಧಿಕಾರ ಮಾನ್ಯ ಜಿಲ್ಲಾಧಿಕಾರಿಗಳಿಗೆ ಇರುವುದನ್ನು ಸಭೆಯಲ್ಲಿ ಪ್ರಸ್ಥಾಪಿಸಿ ಪ್ಯಾಕೇಜ ನಂ. 13 ನೇದಕ್ಕೆ ಗುತ್ತಿಗೆದಾರರಾದ ಶ್ರೀ ಹರೀಶ ಆರ್. ನಾಯ್ಕ ಇವರು ಒಪ್ಪಿರುವ ದರ ಶೇ. 15.22 ಕಡಿಮೆ ಹಾಗೂ ಪ್ಯಾಕೇಜ ನಂ. 18 ನೇದಕ್ಕೆ ಗುತ್ತಿಗೆದಾರರಾದ ಶ್ರೀ ವೆಂಕಟರಮಣ ವಿ. ನಾಯ್ಕ ಇವರು ಒಪ್ಪಿಗೆ ಸಲ್ಲಿಸಿದ ದರ ಶೇ. 15.90 ಕಡಿಮೆ ಇವುಗಳಿಗೆ ಅನುಮೋದನೆಯನ್ನು ನೀಡುವಂತೆ ಪ್ರಸ್ಥಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಅನುಮೋದನೆಯೊಂದಿಗೆ ಕಾಮಗಾರಿಯನ್ನು ನಿರ್ವಹಿಸಿ ಕೊಳ್ಳಲು ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ ಠರಾವು ಪಾಸು ಮಾಡಲಾಯಿತು.

| | |
|---|---|
| ವಿಷಯ ನಂ. 18/4 | ರೋಟರಿಕ್ಲಬ್ ಹಾಗೂ ಜೈಂಟ್ಸ ಕ್ಲಬ್ ಅಂಕೋಲಾ ರವರಿಂದ ಸಿಬ್ಬಂದಿಗಳ ಸೇವೆಯನ್ನು ಪಡೆದಿರುವ ಬಗ್ಗೆ ಸದ್ರಿ ಸಿಬ್ಬಂದಿಗಳ ಮಾಸಿಕ ವೇತನ ಸಂದಾಯ ಮಾಡುವ ಬಗ್ಗೆ ಮುಖ್ಯಾಧಿಕಾರಿಗಳೀಗೆ ಅಧಿಕಾರ ನೀಡುವುದು. |
| ಠರಾವ ನಂ. 21 | ರೋಟರಿಕ್ಲಬ್ ಹಾಗೂ ಜೈಂಟ್ಸ ಕ್ಲಬ್ ಅಂಕೋಲಾ ರವರಿಂದ ಪಡೆದಿರುವ ಕಾರ್ಮಿಕರಿಗೆ 11 ತಿಂಗಳ ಮಾಸಿಕ ವೇತನವನ್ನು ಸಂದಾಯ ಮಾಡುವ ಬಗ್ಗೆ ಮಂಜೂರಾತಿ ಪಡೆದು ಪ್ರತಿ ತಿಂಗಳು ರೋಟರಿ ಕ್ಲಬ್ ಅಂಕೋಲಾ ರವರಿಗೆ 7 ಕಾರ್ಮಿಕರ ವೇತನ ರೂ. 22,500=00 ಹಾಗೂ ಜೈಂಟ್ಸ ಕ್ಲಬ್ ಅಂಕೋಲಾ ರವರಿಂದ ಕಾರ್ಮಿಕರನ್ನು ಎರವಲು ಪಡೆದು ಸದ್ರಿಯವರಿಗೆ ಮಾಸಿಕ ರೂ. 30,500=00 ಸಂದಾಯ ಮಾಡುವ ವಿಷಯವನ್ನು ಸಭೆಯಲ್ಲಿ ಪ್ರಸ್ಥಾಪಿಸಲಾಯಿತು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಪ್ರತಿ ತಿಂಗಳ ವೇತನವನ್ನು ಸಭೆಯ ಮಂಜೂರಾತಿ ಪಡೆದು ಸಂದಾಯ ಮಾಡುವುದು ವಿಳಂಬವಾಗುತ್ತಿರುವುದರಿಂದ ಈಗಾಗಲೇ ಮಂಜೂರಾತಿ ನೀಡಿರುವುದರಿಂದ ಸದ್ರಿಯವರಿಗೆ ಮಾಸಿಕ ವೇತನ ಪಾವತಿಸುವ ಅಧಿಕಾರವನ್ನು ಮುಖ್ಯಾಧಿಕಾರಿಗಳಿಗೆ ನೀಡಿ ಠರಾವು ಪಾಸು ಮಾಡಲಾಯಿತು. |
| ವಿಷಯ ನಂ. 18/5 | ಲಕ್ಷ್ಮೇಶ್ವರ ಕಾಳಮ್ಮ ದೇವಸ್ಥಾನದ ಎದುರಿನ ತುಳಸಿ ಕಟ್ಟೆಯನ್ನು ತೆರವುಗೊಳಿಸುವ ಬಗ್ಗೆ ಬಂದ ಅರ್ಜಿ ವಿಚಾರ. |
| ಠರಾವ ನಂ. 22 | ಲಕ್ಷ್ಮೇಶ್ವರ ಕಾಳಮ್ಮ ದೇವಸ್ಥಾನದ ಎದುರು ಇರುವ ಅನಾಧಿಕಾಲದ ತುಳಸಿ ಕಟ್ಟೆಯನ್ನು ತೆರವುಗೊಳಿಸುವ ಬಗ್ಗೆ ಬಂದಿರುವ ಅರ್ಜಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಸಭೆಯಲ್ಲಿ ಈ ಕುರಿತು ಚರ್ಚಿಸಿ ಸದ್ರಿ ರಸ್ತೆಯ ಮಧ್ಯಭಾಗದಲ್ಲಿ ಅನಾಧಿಕಾಲದಿಂದ ಇರುವ ತುಳಸಿ ಕಟ್ಟೆಯನ್ನು ತೆರವುಗೊಳಿಸುವುದು ಕಾರ್ಯಾಲಯಕ್ಕೆ ಸಂಬಂಧಪಟ್ಟಿರುವುದಿಲ್ಲ. ಈ ಬಗ್ಗೆ ದೇವಸ್ಥಾನದ ಕಮೀಟಿಯವರಿಗೆ ಲಿಖಿತವಾಗಿ ತಿಳಿಸಿ ಈ ಬಗ್ಗೆ ಕ್ರಮಕೈಗೊಳ್ಳುವಂತೆ ನಿರ್ಣಯಿಸಿ ಠರಾವು ಪಾಸು ಮಾಡಲಾಯಿತು. |
| ವಿಷಯ ನಂ. 18/6 | ಜಿ.ಎನ.ಮಹಾಲೆ ಮಾಲೀಕತ್ವದ ಕಟ್ಟಡ ಬಾಡಿಗೆ ಸಂದಾಯ ಮಾಡುವ ಬಗ್ಗೆ ಹಾಗೂ ಬಾಡಿಗೆಯನ್ನು ನವೀಕರಿಸುವ ಬಗ್ಗೆ ಚರ್ಚಿಸುವುದು. |
| ಠರಾವ ನಂ. 23 | ಪಟ್ಟಣ ಪಂಚಾಯತದ ವ್ಯಾಪ್ತಿಯಲ್ಲಿ ಇರುವ ದಿಲೀಪ ಎಲ್. ಮಹಾಲೆ ಯವರಿಗೆ ಸಂಬಂಧಪಟ್ಟ ಕಟ್ಟಡ ನಂ. 2522 ನೇದರ ಬಾಡಿಗೆಯನ್ನು 2002–03 ರಿಂದ 2009–2010 ರವರೆಗೆ ಸಂದಾಯ ಮಾಡದೇ ಇರುವುದರಿಂದ ಈ ಹಣವನ್ನು ನೀಡಿ ಮುಂದಿನ ವರ್ಷದಿಂದ ಸದ್ರಿ ಕಟ್ಟಡದ ಬಾಡಿಗೆಯನ್ನು ರೂ. 2000=00 ಕ್ಕೆ ಏರಿಸುವಂತೆ ಅರ್ಜಿ ಸಲ್ಲಿಸಿರುವ ವಿಷಯವನ್ನು ಸಭೆಯಲ್ಲಿ ಪ್ರಸ್ಥಾಪಿಸಲಾಯಿತು. ಈ ಕುರಿತು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ ಈಗಾಗಲೇ ಸದ್ರಿ ಕಟ್ಟಡವನ್ನು 1973 ರಿಂದ ಬಾಡಿಗೆ ನಾತೆಯಲ್ಲಿ ಪಡೆದು ಕಳೆದ 2002–03 ರಿಂದ ಕೆ.ಪಿ.ಟಿಸಿ.ಎಲ್ ಇಲಾಖೆಗೆ ದೂರುಗಳನ್ನು ದಾಖಲಿಸುವ ಬಗ್ಗೆ ನೀಡಿರುತ್ತಿದ್ದು, ಈ ಕಟ್ಟಡವು ಕಾರ್ಯಾಲಯಕ್ಕೆ ಅವಶ್ಯವಾಗಿ ಬೇಕಾಗಿರುವುದರಿಂದ ಸದ್ರಿಯುವರ ಬಾಡಿಗೆಯನ್ನು ರೂ. 600=00 ರಂತೆ 8 ವರ್ಷಗಳ ಬಾಡಿಗೆ ರೂ. 4800=00 ಸಂದಾಯಿಸುವಂತೆ ಸಭೆಯು ಒಪ್ಪಿಗೆಯನ್ನು ನೀಡಿ ಮುಂದಿನ ವರ್ಷದಿಂದ ಬಾಡಿಗೆಯನ್ನು ವರ್ಷಕ್ಕೆ ಶೇ. 50 ರಷ್ಟು ಹೆಚ್ಚಿಸುವಂತೆ ಸಭೆಯು ನಿರ್ಣಯಿಸಿತು. ವರ್ಷಕ್ಕೆ ರೂ. 900=00 ರಂತೆ ಸಂದಾಯಿಸಲು ಸಭೆಯು ಮಂಜೂರಿ ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು. |

ವಿಷಯ ನಂ. 18/7 ಕೇಣಿ ಮುಖ್ಯ ರಸ್ತೆಯಲ್ಲಿ ಕೆರೆಯ ಹತ್ತಿರ ಗಟಾರ ದುರಸ್ಥಿಪಡಿಸಿದ ಬಗ್ಗೆ ತಯಾರಿಸಿದ ಅಂದಾಜು ಪತ್ರಿಕೆಗೆ ಮಂಜೂರಿ ನೀಡುವುದು.

ಠರಾವ ನಂ. 24 ಪಟ್ಟಣ ಪ್ರದೇಶದಲ್ಲಿರುವ ಕೇಣಿ ಮುಖ್ಯ ರಸ್ತೆಯಲ್ಲಿ ಬರುವ ಗಟಾರವು ಕುಸಿದು ಬಿದ್ದಿರುವುದರಿಂದ ಇದನ್ನು ದುರಸ್ಥಿಪಡಿಸುವಂತೆ ಸಾರ್ವಜನಿಕರು ಮತ್ತು ಅಲ್ಲಿನ ವಾರ್ಡ ಸದಸ್ಯರು ತಿಳಿಸಿರುವಂತೆ ಈ ಕೆಲಸವನ್ನು ತುರ್ತಾಗಿ ಮಳೆಗಾಲದ ಪೂರ್ವದಲ್ಲಿಯೇ ನಿರ್ವಹಿಸಬೇಕಾಗಿರುವುದರಿಂದ ಈ ಬಗ್ಗೆ ತಯಾರಿಸಿದ ಅಂದಾಜು ಪತ್ರಿಕೆಗೆ ರೂ. 36,000=00 ಕ್ಕೆ ಮಂಜೂರಿ ಪಡೆಯುವ ಬಗ್ಗೆ ಸಭೆಯಲ್ಲಿ ಮಂಡಿಸಲಾಯಿತು. ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಗಿ ಸದ್ರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಸ್ಥಳೀಯ ಗುತ್ತಿಗೆದಾರರಾದ ನಿರ್ವಹಿಸಿಕೊಳ್ಳುವ ಬಗ್ಗೆ ಸಭೆಯು ಒಪ್ಪಿಗೆಯನ್ನು ನೀಡಿ ಠರಾವು ಪಾಸು ಮಾಡಲಾಯಿತು.

ವಿಷಯ ನಂ. 18/8 ಬಿ.ಎಸ್.ಎನ್.ಎಲ್ ಮತ್ತು ವಡಾಪೋನ ರವರಿಗೆ ಕೇಬಲನ್ನು ಅಳವಡಿಸುವ ಬಗ್ಗೆ ಪರವಾನಿಗೆ ಕುರಿತು.

ಠರಾವ ನಂ. 25 ಬಿ.ಎಸ್.ಎನ್.ಎಲ್ ಮತ್ತು ವಡಾಪೋನ ಮೊಬೈಲ ದೂರವಾಣಿಯ ಕೇಬಲನ್ನು ಬಜಾರ ಮುಖ್ಯ ರಸ್ತೆಯಲ್ಲಿ ಅಳವಡಿಸುವ ಬಗ್ಗೆ ಅರ್ಜಿಯನ್ನು ಸಲ್ಲಿಸಿರುವಂತೆ ಈ ಬಗ್ಗೆ ಪರವಾನಿಗೆಯನ್ನು ನೀಡುವ ಕುರಿತು ಸಭೆಯಲ್ಲಿ ಪ್ರಸ್ಥಾಪಿಸಲಾಗಿ ಈ ಬಗ್ಗೆ ಸರ್ವಸದಸ್ಯರು ಈ ಕೆಲಸವನ್ನು ನಿರ್ವಹಿಸಿದ್ದಲ್ಲಿ ಎಲ್ಲಾ ರಸ್ತೆಗಳು ಹೊಂಡ ಬಿದ್ದು ಹಾಳಾಗುತ್ತಿರುವುದರಿಂದ ಹಾಗೂ ಈ ಹಿಂದೆ ಕೆ.ಸಿ. ರಸ್ತೆಯಲ್ಲಿ ಅಗೆದು ರಸ್ತೆಯನ್ನು ಹಾಳು ಮಾಡಿರುವುದರಿಂದ ಈ ರಸ್ತೆಯನ್ನು ಸರಿಪಡಿಸುವ ಶರ್ತಿಗೆ ಒಳಪಟ್ಟು ಮತ್ತು ರಸ್ತೆಯ ಕಟಿಂಗ ಚಾರ್ಜನ್ನು ಪಟ್ಟಣ ಪಂಚಾಯತಕ್ಕೆ ತುಂಬಿದ್ದಲ್ಲಿ ಪರವಾನಿಗೆಯನ್ನು ನೀಡುವ ಬಗ್ಗೆ ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ ಠರಾವು ಪಾಸು ಮಾಡಲಾಯಿತು.

ವಿಷಯ ನಂ. 18/9 ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ136 ಎಂ.ಡಬ್ಲ್ಯು.ಪಿ.2009 ದಿನಾಂಕ: 2–1–2010 ನೇದರ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳುವ ಕುರಿತು.

ಠರಾವ ನಂ. 26 ಭಾರತ ಸರ್ಕಾರದ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ರಸ್ತೆಗಳಲ್ಲಿ/ ಸ್ಥಳಗಳಲ್ಲಿ ಗುರದ್ವಾರ/ಮಸೀದಿ/ದೇವಾಲಯ/ಚರ್ಚ ಮುಂತಾದ ಯಾವುದೇ ಧಾರ್ಮಿಕ ಸಂಘ ಸಂಸ್ಥೆಗಳನ್ನು ಅನಧಿಕೃತವಾಗಿ ಕಟ್ಟಬಾರದೆಂದು ಹಾಗೂ ಈ ಹಿಂದೆ ನಿರ್ಮಿಸಿದಂತಹ ಧಾರ್ಮಿಕ ಸ್ವರೂಪದ ಅನಧಿಕೃತ ಕಟ್ಟಡಗಳನ್ನು ಸರ್ಕಾರವು ಪ್ರಕರಣವಾರು ಮರು ಪರಿಶೀಲಿಸಲು ಸೂಕ್ತ ಕ್ರಮ ಕೈಕೊಳ್ಳಬೇಕಾಗುತ್ತದೆ ಎಂಬ ಕುರಿತಂತೆ ಹೊರಡಿಸಲಾದ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ:136 ಎಂ.ಡಬ್ಲ್ಯೂಪಿ–2009 ದಿನಾಂಕ: 2–1–2010 ನೇದನ್ನು ಸಭೆಯಲ್ಲಿ ಓದಿ ಹೇಳಲಾಯಿತು.

ಈ ವಿಷಯವಾಗಿ ಸಭೆಯು ವ್ಯಾಪಕವಾಗಿ ಚರ್ಚೆ ನಡೆಸಿ ಅಂಕೋಲಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಇನ್ನು ಮುಂದೆ ಸಾರ್ವಜನಿಕ ರಸ್ತೆಗಳಲ್ಲಿ/ಸ್ಥಳಗಳಲ್ಲಿ ಸರ್ಕಾರದ ಸುತ್ತೋಲೆಯಲ್ಲಿ ವಿವರಿಸಿರುವಂತೆ ಯಾವುದೇ ಧಾರ್ಮಿಕ ಸಂಘ ಸಂಸ್ಥೆಗಳನ್ನು ಅನಧಿಕೃವಾಗಿ ಕಟ್ಟಲು ಅವಕಾಶ ನೀಡದೇ ಇರಲು ನಿರ್ಣಯಿಸಲಾಯಿತು. ಅಲ್ಲದೇ ಈಗಾಗಲೇ ಅಂತಹ ಯಾವುದಾದರು ಪ್ರಕರಣಗಳು ಇದ್ದಲ್ಲಿ ಸರ್ಕಾರದಿಂದ ಕೈಗೊಳ್ಳುವ ನಿರ್ಣಯಕ್ಕೆ ಅನುಗುಣವಾಗಿ ಕ್ರಮ ಜರುಗಿಸಲು ಠರಾಯಿಸಲಾಯಿತು.

| | |
|---|---|
| ವಿಷಯ ನಂ. 18/10 | ಪಟ್ಟಣ ಪಂಚಾಯತ ಕಾರ್ಯಾಲಯದಲ್ಲಿ ಸಹಾಯವಾಣಿಯನ್ನು ತೆರೆಯುವ ಬಗ್ಗೆ ಗುತ್ತಿಗೆಯನ್ನು ನೇಮಿಸುವ ಕುರಿತು. |
| ಠರಾವ ನಂ. 27 | ಸರಕಾರದ ನಿರ್ದೇಶನದನ್ವಯ ಪ್ರತಿಯೊಂದು ಸ್ಥಳೀಯ ಸಂಸ್ಥೆಗಳಲ್ಲಿ ಸಹಾಯವಾಣಿಯನ್ನು ತೆರೆಯಬೇಕಾಗಿದ್ದು ಅದರಂತೆ ಅಂಕೋಲಾ ಪಟ್ಟಣ ಪಂಚಾಯತಿಯಲ್ಲಿ ಸಹ ಸಾರ್ವಜನಿಕರ ಅನುಕೂಲಕ್ಕೆ ಸಹಾಯವಾಣಿ ತೆರೆಯಲಾಗಿದ್ದು ಈ ಕಚೇರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಸಂಜೀವ ಎಂ. ನಾಯ್ಕ ಇವರನ್ನು ಈ ಕೆಲಸಕ್ಕೆ ನೇಮಿಸಿ ಠರಾವ ನಂ. 40 ದಿನಾಂಕ: 08-07-2008 ರನ್ವಯ ಠರಾಯಿಸಿ ಕೆಲಸ ನಿರ್ವಹಿಸಲಾಗುತ್ತಿತ್ತು. ಆದರೆ ಈ ಮಧ್ಯದಲ್ಲಿ ತನಗೆ ಕೆಲಸದ ಒತ್ತಡದಿಂದ ಸಹಾಯವಾಣಿಯನ್ನು ನಿರ್ವಹಿಸುವುದು ಕಷ್ಟವಾಗಿರುವುದಾಗಿ ಅವರು ತಿಳಿಸಿರುವುದರಿಂದ ಸಹಾಯವಾಣಿ ನಿಲ್ಲಿಸುವ ಪರಿಸ್ಥಿತಿ ಉದ್ಭವಾಗುವುದರಿಂದ ಹಾಲಿ ಲಭ್ಯವಿರುವ ಸಿಬ್ಬಂದಿಗಳಿಂದ ಸಹಾಯವಾಣಿ ನಿರ್ವಹಿಸಲಾಗುತ್ತಿದ್ದು, ಈ ಮಧ್ಯೆ ಅಧ್ಯಕ್ಷರು ಜೈಂಟ್ಸ ಕ್ಲಬ್ ಅಂಕೋಲಾ ರವರು ಪ್ರತಿ ತಿಂಗಳು ರೂ. 4000=00 ದರಕ್ಕೆ ಎರಡು ಸಿಬ್ಬಂದಿಗಳನ್ನು ಸಹಾಯವಾಣಿ ಕುರಿತು ಒದಗಿಸುವುದಾಗಿ ಲಿಖಿತವಾಗಿ ಸಲ್ಲಿಸಿದ ಅರ್ಜಿಯ ಕುರಿತು ಸಭೆಯಲ್ಲಿ ತಿಳಿಸಿ ಹೇಳಲಾಯಿತು. ಈ ಕುರಿತು ದರವಾರುಗಳನ್ನು ಕರೆದಲ್ಲಿ ಹೆಚ್ಚಿನ ದರ ಬರುವ ಸಂಬಂಧ ಇರುವುದರಿಂದ ಜೈಂಟ್ಸ ಕ್ಲಬ್ ಅಂಕೋಲಾ ರವರು ಸಲ್ಲಿಸಿದ ದರ ಪ್ರತಿ ತಿಂಗಳು ರೂ. 4000=00 ಪಟ್ಟಣ ಪಂಚಾಯತ ಆರ್ಥಿಕ ದೃಷ್ಟಿಯಿಂದ ಹಿತಕರವಾಗಿರುವುದರಿಂದ ಅವರ ಮನವಿಯನ್ನು ಒಪ್ಪಿ ಅವರಿಂದ ಸಿಬ್ಬಂದಿಗಳನ್ನು ಪಡೆದು ಸಹಾಯವಾಣಿ ನಡೆಸುವಂತೆ ಹಾಗೂ ಸಹಾಯವಾಣಿಯಲ್ಲಿ ಈ ಹಿಂದೆ ನಿರ್ವಹಿಸಿದ ಕೆಲಸದ ಬಾಬ್ತು ಹಾಗೂ ಇನ್ನು ಮುಂದೆ ನಿರ್ವಹಿಸುವ ಕೆಲಸದ ಬಾಬ್ತು ಬಟವಡೆ ಮಾಡಲು ಸಭೆಯಲ್ಲಿ ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು. |
| ವಿಷಯ ನಂ. 18/11 | ಶೇ. 22.75 ರ ಯೋಜನೆಯಡಿಯಲ್ಲಿ ಹೊನ್ನೆಕೇರಿ ಶಾರದಾ ಉತ್ಸವ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿಯ ಪರಿಷ್ಕೃತ ಅಂದಾಜು ಪತ್ರಿಕೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ. |
| ಠರಾವ ನಂ. 28 | ಎಸ್.ಎಫ.ಸಿ ಯೋಜನೆಯ ಶೇ. 22.75 ರ ಅನುದಾನದಲ್ಲಿ ಹೊನ್ನೆಕೇರಿ ಶಾರದಾ ಉತ್ಸವ ಕಟ್ಟಡ ನಿರ್ಮಾಣದ ಬಗ್ಗೆ ಟೆಂಡರ ಪ್ರಕಾರ ಗುತ್ತಿಗೆದಾರರಾದ ಶ್ರೀ ಹರೀಶ ಆರ್. ನಾಯ್ಕ ರೂ. 40,000=00 ಕ್ಕೆ ಮಂಜೂರಾತಿಯನ್ನು ಪಡೆದು ಕಾಮಗಾರಿಯನ್ನು ಪ್ರಾರಂಭಿಸುವ ಹಂತದಲ್ಲಿ ಸದ್ರಿ ಕಟ್ಟಡದ ಅಳತೆಯನ್ನು ಅಲ್ಲಿನ ನಾಗರೀಕರು ಮತ್ತು ವಾರ್ಡ ಸದಸ್ಯರ ಅಭಿಪ್ರಾಯದಂತೆ ಬದಲಾವಣೆ ಮಾಡಿ ಮಂಜೂರಿಯ ನಿರೀಕ್ಷಣೆಯ ಮೇರೆಗೆ ಕೆಲಸವನ್ನು ಪ್ರಾರಂಭಿಸಿ ಪೂರ್ತಿಗೊಳಿಸಲಾಗಿರುತ್ತದೆ. ಸದ್ರಿ ಕಾಮಗಾರಿಯ ಅಂದಾಜು ರೂ. 40,000=00 ಕ್ಕೆ ಮಂಜೂರಾತಿಯನ್ನು ಪಡೆದಿರುವುದರಿಂದ ಹೆಚ್ಚಿನ ಕೆಲಸ ನಿರ್ವಹಿಸಿರುವುದರಿಂದ ಪರಿಷ್ಕೃತ ಅಂದಾಜು ಪತ್ರಿಕೆ ರೂ. 65,789=00 ಮಂಜೂರಾತಿಯನ್ನು ಪಡೆಯುವ ಬಗ್ಗೆ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.<br>ಈ ವಿಷಯದ ಮೇಲೆ ಚರ್ಚಿಸಲಾಗಿ ಈಗಾಗಲೇ ಸದ್ರಿ ಶಾರದಾ ಉತ್ಸವ ಕಟ್ಟಡದ ಕೆಲಸವನ್ನು ಪ್ರಾರಂಭಿಸಿ ಪೂರ್ತಿಗೊಳಿಸಿರುವುದರಿಂದ ಅಂದಾಜಿಗಿಂತ ಹೆಚ್ಚುವರಿಯಾಗಿ ನಿರ್ವಹಿಸಿದ ಮೊತ್ತ ರೂ. 25,789=00 ಸಭೆಯು ಮಂಜೂರಾತಿಯನ್ನು ನೀಡಿ ಶೇ. 22.75 ರ ಅನುದಾನದಲ್ಲಿ ಈ ಹಣ ಪಾವತಿಸುವಂತೆ ಸಭೆಯು ಒಪ್ಪಿಗೆಯನ್ನು ನೀಡಿ ಠರಾವು ಸರ್ವಾನುಮತದಿಂದ ಪಾಸು ಮಾಡಲಾಯಿತು. |